“ಕೇಳಿ. ಆಫೀಸಿಂದ ಬಂದು ನೋಡ್ತೀನಿ, ದೊಡ್ಡ ಕಷ್ಟಕ್ಕಿಟ್ಟುಕೊಂಡಿದೆ. ಎಷ್ಟೊಂದು ಜನ ಬಂದಿದಾರೆ. ಪ್ರೀತಿ ಹಟ ಹಿಡಿದು ಕೂತಿದಾಳೆ. ಫರೀನ್ ಬರದೆ ಇದ್ರೆ ನಾನು ಕೇಕ್ ಕಟ್ ಮಾಡೋಲ್ಲ ಅಂತ. ಅವಳು ಫರೀನ್‌ಗೆ ಪ್ರಾಮಿಸ್ ಮಾಡಿದಾಳಂತೆ...”

ಫರ್ಝಾನ್ನಾ ಬಹಳ ವ್ಯಸ್ತಳಾಗಿ ಹೇಳಿದಳು, “ಅಯ್ಯೋ ಹೀಗಾ!? ಅವಳಿಗೆ ಫೋನ್ ಕೊಡಿ, ಫರೀನ್ ಅರ್ಥಮಾಡಿಸ್ತಾಳೆ.”

ಆ ಕಡೆಯಿಂದ ದಾಶಗುಪ್ತೊ ಅಸಹಾಯಕರಾಗಿ ನುಡಿದರು, “ಅವಳು ರೂಮೊಳಗೆ ಸೇರ್ಕೊಂಡು ಬಾಗಿಲು ಮುಚ್ಚಿಕೊಂಡಿದಾಳೆ. ಫರೀನ್ ಬರೋವರೆಗೆ ಬಾಗಿಲು ತೆಗೆಯಲ್ಲವಂತೆ”.

“ಓ, ಸರಿ, ಬನ್ನಿ. ರೆಡಿಯಾಗಿರ್ತೀವಿ.”

“ತುಂಬಾ ಥ್ಯಾಂಕ್ಸ್!”

ಫೋನ್ ಇಟ್ಟು ತಿರುಗಿದಳು. ಹಿಂದೆ ಫರೀನ್ ನಿಂತಿದ್ದಳು. ಖಂಡಿತ, ಹಿಂದೆ ನಿಂತ್ಕೊಂಡು ಎಲ್ಲ ಕೇಳಿಸ್ಕೊಂಡಿದಾಳೆ.

ಫರ್ಝಾನ್ನಾ ಅಂದಳು, “ನಡೀ, ಪ್ರೀತಿ ಮನೆಗೆ ಹೋಗೋಣ. ನೀನಿಲ್ಲದೆ ಅವಳು ಕೇಕ್ ಕಟ್ ಮಾಡುವುದಿಲ್ಲವಂತೆ”.

ಫರೀನ್ ಅದೇ ಮುಗ್ಧ ನಗುವಿನೊಂದಿಗೆ ಹೇಳಿದಳು, “ನಾನು ಮೊದಲೇ ಹೇಳಿದೆ. ನಾನು ಹೋಗದೆ ಇದ್ರೆ ಪ್ರೀತಿಯ ಹುಟ್ಟಿದ ಹಬ್ಬ ಆಗೊದಿಲ್ಲ ಅಂತ”.

ಮಗಳಿಗೆ ರೆಡಿ ಮಾಡ್ತಾ ಮಾಡ್ತಾ ಫರ್ಝಾನ್ನಾ ಯೋಚನೆ ಮಾಡತೊಡಗಿದಳು. ಪ್ರೀತಿಗೆ ಗಿಫ್ಟ್ ಕೊಡೋಕೆ ಮನೆಯಲ್ಲೇನೂ ಇಲ್ಲ. ಏನೂ ಗಿಫ್ಟ್ ತರೋಕೆ ಆಗಿರಲಿಲ್ಲ. ಖಾಲಿ ಕೈಯಲ್ಲಿ ಹುಟ್ಟಿದ ಹಬ್ಬಕ್ಕೆ ಹೋಗೋದು ಚೆನ್ನಾಗಿರೋಲ್ಲ. ಸೀರೆ ಉಟ್ಕೋತಾ ಯೋಚಿಸ್ತಾ ಇದ್ದಳು. ಅಷ್ಟೊತ್ತಿಗೆ ಸರಿಯಾಗಿ ಅವಳಿಗೆ ಆಶ್ಚರ್ಯವಾಗುವಂತೆ ಫರೀನ್ ಒಂದು ಬಾರ್ಬಿ ಡಾಲ್ ಹಿಡಿದು ಎದುರು ಬಂದು ನಿಂತಳು.

